ನಿರ್ದಿಷ್ಟವಾದ ಹೇಳಿಕೆಯನ್ನು ಹೇಳಬೇಕು.

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಹೇಳಿರುವುದು ನಿಜ. ನಾನು ಬಂದ ಮೇಲೆ ದಲ್ಲಾಳಿಗಳು ಏನಾದರೂ ಮಾರ್ಕೆಟ್‌ಗೆ ಬಂದರೆ ಅಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡತಕ್ಕಂಥ ಕಟ್ಟುನಿಟ್ಟಿನ ಕಾರ್ಯಕ್ರಮ ಹಾಕಿಕೊಂಡು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವಂಥ ನಿದರ್ಶನಗಳಿವೆ. ಈಗ ಅಂಥ ದಲ್ಲಾಳಿಗಳು ಯಾರು ಇಲ್ಲ. ಇವತ್ತು ಡ್ರಿಪ್ ಇರಿಗೇಷನ್‌ಗೆ 100ಕ್ಕೆ 100ರಷ್ಟು ಸಬ್ಸಿಡಿ ಕೊಡಬೇಕೆಂದು ಕೇಳಿದ್ದಾರೆ, ನಾವು ಕೇಂದ್ರ ಸರ್ಕಾರದ ಯೋಜನಾ ಆಯೋಗಕ್ಕೆ 90 ಪರ್ಸೆಂಟ್‌ನ್ನಾದರೂ ಕೊಡಬೇಕೆಂದು ಕೇಳಿಕೊಂಡಿದ್ದೆವು, ಆದರೆ ಅದಕ್ಕೆ ಒಪ್ಪದೆ 50 ಪರ್ಸೆಂಟ್‌ಗೆ ಒಪ್ಪಿಗೆಯನ್ನು ಒಂದು ತಿಂಗಳ ಹಿಂದೆ ನೀಡಿದ್ದಾರೆ. ಇವತ್ತು ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ. ಇವತ್ತು ಮಹಿಳಾಕಾರ್ಯಾಗಾರಗಳನ್ನು ಪ್ರಾರಂಭ ಮಾಡಿದರೆ ಅಂಥವರಿಗೆ ಹೆಚ್ಚಿನ ಪ್ರೋತ್ಸಾಹಧನವನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ಮನೆಗಳನ್ನು ಕಟ್ಟಿಕೊಡಬೇಕೆಂಬುದನ್ನು ಹೇಳಿದರು, ಈ ಗುರಿಯನ್ನು ನಾವು ಈಗಾಗಲೇ ಹಾಕಿಕೊಂಡಿದ್ದೇವೆ. ಶೂಟ್‌ರೇರಿಂಗ್ ಹೌಸ್‌ಗೆ ಹಿಂದೆ 25 ಸಾವಿರ ಕೊಡುತ್ತಿದ್ದ ಹಣವನ್ನು ಈಗ 32 ಸಾವಿರ ಮಾಡಿ ಅಂಥವರಿಗೆ ಸಬ್ಸಿಡಿ ಕೊಟ್ಟು ಮನೆಯನ್ನು ಕೊಡತಕ್ಕಂಥ ಗುರಿಯನ್ನು ಹಮ್ಮಿಕೊಂಡಿದ್ದೇವೆ. 5 ಸಾವಿರ ಮನೆಗಳನ್ನು ಈ ರಾಜ್ಯಕ್ಕೆ ಕೊಡುತ್ತಿದ್ದೇವೆ. ಇವತ್ತು ರೀಲಿಂಗ್‌ಗೆ ಹೋಗತಕ್ಕಂಥ ಗೂಡಿಗೆ 25 ರೂಪಾಯಿಯಿಂದ 30 ರೂಪಾಯಿ ಮಾಡಬೇಕೆಂದು ಸನ್ಮಾನ್ಯ ಮುದ್ದಹನುಮೇಗೌಡರು ಕೇಳಿದ್ದಾರೆ. ಅದನ್ನು ನಾವು ಈಗಾಗಲೇ ಹಣಕಾಸಿನ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದ ತಕ್ಷಣ ಅದನ್ನು ಮಾಡಿಕೊಡುತ್ತೇವೆ.

ಅಧ್ಯಕ್ಷರು: ಇವತ್ತು ಚೆನ್ನಾಗಿ ಉತ್ತರ ಹೇಳಿದಿರಿ. ಈಶ್ವರಪ್ಪನವರು, ನೀವು ಡೆಲ್ಲಿಗೆ ಹೋಗೋಲ್ವಾ? ಯಡಿಯೂರಪ್ಪನವರೇ, ನೀವು ಬರೋದಿಲ್ವಾ ಈಶ್ವರಪ್ಪನವರ ಜೊತೆಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಇಲ್ಲಿ ನೋಡಿಕೊಳ್ಳುತ್ತಾರೆ.

ನಗರ ಸಭೆ ವ್ಯಾಪ್ತಿಯೊಳಗೆ ಬರುವ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವುದು

41 (209)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಸಭೆ ವ್ಯಾಪ್ತಿ ಒಳಗೆ ಬರುವ ಅಕ್ರಮ ಕಟ್ಟಡಗಳನ್ನು

ಸಕ್ರಮಗೊಳಿಸುವುದಕ್ಕೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಆ) ಸಕ್ರಮಗೊಳಿಸಲು ಪ್ರತಿ ಚದರ ಅಡಿಗೆ ಸರ್ಕಾರವು ನಿಗಧಿಪಡಿಸಿರುವ ಒಟ್ಟುಮೊತ್ತದಲ್ಲಿ ಪ್ರತಿಶತ ನಗರಸಭೆಗೆ ಹಾಗೂ ಸರ್ಕಾರಕ್ಕೆ ಸಂದಾಯವಾಗುವ ಮೊತ್ತವೆಷ್ಟು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿನ ಪುರಸಭೆ ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿ ದಿನಾಂಕ: 1- 1- 1995ಕ್ಕೂ ಮುಂಚೆ ನಿರ್ಮಾಣವಾದ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ಸರ್ಕಾರವು ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991ನ್ನು ಜಾರಿಗೊಳಿಸಲಾಗಿದೆ. ಈ ಅಧಿನಿಯಮದ ಪ್ರಕಾರ ಸಕ್ಷಮ ಪ್ರಾಧಿಕಾರಗಳನ್ನು ರಚಿಸಲಾಗಿದೆ. ಸದರೀ ಪ್ರಾಧಿಕಾರಗಳಿಗೆ ದಿನಾಂಕ 31- 12- 1995ಕ್ಕೂ ಮುಂಚೆ ಅನಧಿಕೃತ ಕಟ್ಟಡಗಳನ್ನು ಸ್ರಮಗೊಳಿಸಲು ಅರ್ಜಿಸಲ್ಲಿಸಿದ್ದರೆ ಸದರೀ ಪ್ರಾಧಿಕಾರಗಳು ನಿಯಮಗಳ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿವೆ.

ಆ) ಸದ್ಯಕ್ಕೆ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವಿಕೆಯಿಂದಾಗಿ ಬರುವ ಹಣವು ಸರ್ಕಾರದ ಲೆಕ್ಕಕ್ಕೆ ಜಮಾವಾಗುತ್ತಿದೆ. ಈ ಮೊತ್ತದಲ್ಲಿ ಪ್ರತಿ ಶತಃ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಸರ್ಕಾರಕ್ಕೆ ಎಷ್ಟೆಷ್ಟು ಹಂಚಿಕೆಯಾಗಬೇಕೆಂಬುವುದು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಎಸ್.ಈಶ್ವರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಇದು ಕರ್ನಾಟಕ ರಾಜ್ಯದ ಕೋಟ್ಯಾಂತರ ಬಡವರ ಸೂರಿನ ಪ್ರಶ್ನೆ. ಅನೇಕ ವರ್ಷಗಳಿಂದ ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿರತಕ್ಕಂಥ ಸಣ್ಣಸಣ್ಣ ಗುಡಿಸಲು ನಿವಾಸಿಗಳಿಗೆ ಸಕ್ರಮ ಮಾಡಿಕೊಡುತ್ತೇವೆ ಎಂದು ಸರ್ಕಾರ ಒಪ್ಪಿಕೊಂಡು ತಾವು ಕಾನೂನು ಮಾಡಿದ್ದೀರಿ. ಅದಕ್ಕೆ ಒಂದು ಪ್ರಾಧಿಕಾರವನ್ನು ರಚಿಸಲಾಗಿದೆ ಎಂದು ಹೇಳುತ್ತಿದ್ದಾರೆ. ಹಕ್ಕುಪತ್ರಗಳನ್ನು ಕೊಡುವುದಕ್ಕೆ ಆ ಪ್ರಾಧಿಕಾರದಲ್ಲಿ ಯಾರ್ಯಾರು ಇದ್ದಾರೆ? ಇದರಲ್ಲಿ ಶಾಸಕರು ಇದ್ದಾರೆಯೇ ಮತ್ತೆ ಆ ಪ್ರಾಧಿಕಾರ ಎಷ್ಟು ದಿನಕ್ಕೊಮ್ಮೆ ಸೇರುತ್ತದೆ? ಯಾವಾಗ ಈ ಅಕ್ರಮ ಕಟ್ಟಡಗಳನ್ನು, ಗುಡಿಸಲುಗಳನ್ನು ಸಕ್ರಮಗೊಳಿಸುವ ಯೋಜನೆ ಸರ್ಕಾರದ ಮುಂದಿದೆ? ಇದಕ್ಕೆ ಏನಾದರೂ ಗಡುವು ಹಾಕುತ್ತೀರಾ ಎನ್ನುವುದು ನನ್ನ ಮೊದಲನೇ ಪ್ರಶ್ನೆ. ಎರಡನೇಯದು ಇದಕ್ಕೆ ಫೀಸ್ ಏನು ತಾವು ತೆಗೆದುಕೊಳ್ಳುತ್ತೀರಿ, ಅದು ಪುರಸಭೆ ಮತ್ತು ನಗರಸಭೆಗೆ ಚದರ ಅಡಿಗೆ ಎಷ್ಟು ಎಂದು ಏನಾದರೂ ತೀರ್ಮಾನ ಮಾಡಿದ್ದೀರೋ? ಹಾಗೆ ತೀರ್ಮಾನವಾಗಿರುವಂಥ ಹಣವನ್ನು ನಗರಸಭೆಗೆ ಎಷ್ಟು ಕೊಡಬೇಕು, ಅದೇರೀತಿ ರಾಜ್ಯಸರ್ಕಾರಕ್ಕೆ ಪ್ರತಿಶತಃ ಎಷ್ಟು ಬರುತ್ತದೆ ಎನ್ನತಕ್ಕಂಥ

ಅಂಶವನ್ನೂ ಕೂಡ ತಾವು ತಿಳಿಸಬೇಕು. ಏಕಸ್ಮಾತ್ ಅದು ತೀರ್ಮಾನವಾಗಿಲ್ಲದೇ ಇದ್ದರೆ ಎಷ್ಟು ದಿನಗಳಲ್ಲಿ ಹಣ ನಗರಸಭೆಗೆ ತಲುಪಬೇಕಾಗುತ್ತದೆ. ಪೂರ್ಣಹಣವನ್ನು ನಗರಸಭೆಗೆ ಕೊಡುವ ದಿಕ್ಕಿನಲ್ಲಿ ರಾಜ್ಯಸರ್ಕಾರ ಏನಾದರೂ ಪ್ರಯತ್ನ ಮಾಡಿ ನಗರಸಭೆಗಳ ಅನುಕೂಲಕ್ಕೂ ಕೂಡ ಆ ಹಣವನ್ನು ಕೊಡುವಂಥ ಪ್ರಯತ್ನವನ್ನು ತಾವು ಮಾಡುತ್ತೀರಾ? ಮತ್ತು ಎಷ್ಟು ದಿವಸಗಳಲ್ಲಿ ಈ ಒಂದು ಸಮಸ್ಯೆಯ ಪರಿಹಾರವನ್ನು ತಾವು ಮಾಡುತ್ತೀರಿ?

ಶ್ರೀ ಬಿ.ಎನ್.ಬಚ್ಚೇಗೌಡ: ಈ ಅಕ್ರಮಸಕ್ರಮ ಕಟ್ಟಡಗಳ ಕಾಯ್ದೆ 1991ರಲ್ಲಿ ಬಂದಂಥಾದ್ದು. ಇದಕ್ಕೆ ಅರ್ಜಿ ಹಾಕಿಕೊಳ್ಳಲಿಕ್ಕೆ 31-12-1995ರವರೆಗೆ ಅವಧಿಯನ್ನು ವಿಸ್ತರಿಸಲಾಗಿತ್ತು. ಇವತ್ತು 1-1-95ರ ಹಿಂದೆ ಈ ಅರ್ಜಿಗಳನ್ನು ಹಾಕಿಕೊಂಡಿರತಕ್ಕಂಥಾದ್ದು. ರಾಜ್ಯದಲ್ಲಿ ಈ ಪ್ರಾಧಿಕಾರದ ಮುಂದೆ ಈ ಅರ್ಜಿಗಳನ್ನು ಹಾಕಿಕೊಂಡಿರತಕ್ಕಂಥವರ ಸಂಖ್ಯೆ 1,40,946. ಇಷ್ಟು ಅರ್ಜಿಗಳನ್ನು ಸಲ್ಲಿಸಿರತಕ್ಕಂಥಾದ್ದು, ಪುರಸಭೆ ಮತ್ತು ನಗರಸಭೆ, ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ. ಇದರಲ್ಲಿ ತೀರ್ಮಾನವಾಗಿರತಕ್ಕಂಥಾದ್ದು 19-8-97ಕ್ಕೆ 28,676 ಅರ್ಜಿಗಳು. ಅಷ್ಟು ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಮತ್ತು ಮಾನ್ಯ ಸದಸ್ಯರ ಪ್ರಶ್ನೆ ಯಾವತ್ತು ಇದನ್ನು ನೀವು ಮುಗಿಸುತ್ತೀರಿ, ಗಡುವು ಏನಿದೆ ಎಂದು ಕೇಳಿದ್ದಕ್ಕೆ ಅದರ ಬಗ್ಗೆ ಹೈಕೋರ್ಟಿನಿಂದಲೂ ಒಂದು ಆದೇಶ ಬಂದಿದೆ; ಇದಕ್ಕೆ ಒಂದು ಕಟ್ ಆಫ್ ಡೇಟ್ ಕೊಡಿ, ಯಾವಾಗ ಇದನ್ನು ಮುಗಿಸುತ್ತೇವೆ ಎಂದು ಹೇಳಿ. ಆದ್ದರಿಂದ 2 ತಿಂಗಳಿಂದ 24 ತಿಂಗಳ ಒಳಗೆ ಇನ್ನುಮುಂದೆ ಉಳಿದಂಥ ಪ್ರಕರಣಗಳನ್ನು ತೀರ್ಮಾನ ಮಾಡುವಂಥಾದ್ದು. ಜನತೆಗೆ ಯಾರಿಗೆ ಕಾಯ್ದೆ ಪ್ರಕಾರ ಇದನ್ನು ಒಪ್ಪಿಸಿದ್ದೀರಿ ಎಂದು ಕೇಳಿದ್ದಾರೆ. ಇದು ಸಕ್ರಮ ಪ್ರಾಧಿಕಾರಿಗಳು ಎಂದು ಹೇಳಿ ಆಯಾಯ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿರತಕ್ಕಂಥಾದ್ದು. ಬೆಂಗಳೂರಿನಲ್ಲಿ ಇದು ಆಯಾಯ ಉಪಆಯುಕ್ತರನ್ನು ಮಾಡುವಂಥಾದ್ದು. ಜತೆಗೆ ಬಿ.ಡಿ.ಎ.ಯನ್ನೂ ಸೇರಿ ಇದನ್ನು ವಿಚಾರಣೆ ಮಾಡಿ ಅವರಿಗೆ ಸಕ್ರಮ ಮಾಡುವಂಥ ಕಾರ್ಯವನ್ನು ಇವತ್ತು ಮಾಡಿರತಕ್ಕಂಥಾದ್ದು. ಇದು ಸಕ್ರಮ ಪ್ರಾಧಿಕಾರಿಗಳು ಎಂದು ಹೇಳಿ ಮಾಡಿರುವಂಥಾದ್ದು. ಮತ್ತು ಇದರ ಬಗ್ಗೆ ಹಣ ಯಾರಿಗೆ ಹೋಗುತ್ತದೆ ಎಂದು ತಾವು ಕೇಳಿದ್ದೀರಿ. ಇದು ಒಟ್ಟಾರೆ ಕಂದಾಯ ಇಲಾಖೆಗೆ ಅಂದರೆ ಸರ್ಕಾರಕ್ಕೆ ಜಮಾ ಆಗುತ್ತದೆ. ಅವರು ಕೇಳಿದಂಥ ಉದ್ದೇಶ, ಇದು ಪುರಸಭೆ, ಮಹಾನಗರಪಾಲಿಕೆಗಳ ವ್ಯಾಪ್ತಿಗೆ ಬರುವುದರಿಂದ ಆ ಅಭಿವೃದ್ಧಿ ಸಲುವಾಗಿ ಅಲ್ಲಿಗೇ ಹೋಗಬೇಕು ಎನ್ನುವಂಥಾದ್ದು ಮಾನ್ಯ ಈಶ್ವರಪ್ಪನವರ ಅಭಿಪ್ರಾಯ ಎಂದು ಕಾಣುತ್ತದೆ. ಅದು ಈಗ ಇಲ್ಲ. ಈಗ ಒಟ್ಟಾಗಿ ಹಣ ಸರ್ಕಾರದ ಖಜಾನೆಗೆ ಹೋಗುತ್ತದೆ. ನಮ್ಮ ಉದ್ದೇಶವೂ ಇದೇ ಆಗಿದೆ. ನಾನು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿ ಆ ಹಣ ಇವರಿಗೇ ಸೇರಬೇಕು ಎಂದು ಹೇಳುತ್ತೇನೆ. ಇವು ಬಹಳ ಕಷ್ಟದಲ್ಲಿರತಕ್ಕಂಥ ಸಂಸ್ಥೆಗಳು; ಅಲ್ಲಿಂದ

ಬರುವಂಥ ಹಣ ಅವರಿಗೇ ಸೇರುವಂಥ ವ್ಯವಸ್ಥೆ ಆಗಬೇಕು ಎಂದು ಹೇಳಿ ಈಗ ಫೈನಾನ್ಸ್ ಡಿಪಾರ್ಟ್‌ಮೆಂಟ್ ಕಾರ್ಯದರ್ಶಿಗಳು, ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಯ ಕಾರ್ಯದರ್ಶಿಗಳು ಈ ಮೂರೂ ಜನ ಸೇರಿ ಒಂದು ಅಂತಿಮವಾಗಿ ತೀರ್ಮಾನವನ್ನು ಈ ದೃಷ್ಟಿಯಿಂದ ಕೈಗೊಳ್ಳಬೇಕಾಗಿದೆ. ಆ ಹಣ ಯಾರಿಗೆ ಸೇರಬೇಕು ಎನ್ನುವುದು ಇನ್ನೂ ತೀರ್ಮಾನವಾಗಿಲ್ಲ. ಅದಕ್ಕೆ ನನ್ನ ಒತ್ತು ಕೂಡ ಇದೆ, ಅದು ಇದಕ್ಕೇ ಸೇರಬೇಕು ಎಂದು ಹೇಳಿ. ಈ ಸಂಸ್ಥೆಗಳಿಗೆ ಹಣಕಾಸಿನ ತೊಂದರೆ ಇರುವುದರಿಂದ ಅವರಿಗೇ ಸೇರಬೇಕು ಎಂದು ಇದೆ. ಮತ್ತೆ ಇನ್ನೊಂದು ಪ್ರಶ್ನೆಯನ್ನು ಮಾನ್ಯ ಈಶ್ವರಪ್ಪನವರು ಕೇಳಿದರು. ಅದು ಯಾವ್ಯಾವ ದರ ಹಾಕಿದ್ದೀರಿ ಎನ್ನತಕ್ಕಂಥಾದ್ದು. ಇದು ಬೆಂಗಳೂರು ನಗರ ವ್ಯಾಪ್ತಿಗೆ 18 ಕಿಲೋಮೀಟರ್‌ನಲ್ಲಿ ಬರತಕ್ಕಂಥ ಈ ಅಕ್ರಮ-ಸಕ್ರಮ ಕಟ್ಟಡಗಳಿಗೆ ಕೊಡುವಂಥ ಹಣ 15X20 ನಿವೇಶನಕ್ಕೆ 5 ರೂಪಾಯಿ 55 ಪೈಸೆ ಅಡಿಗೆ. ಅಂದರೆ 1665 ರೂಪಾಯಿ ಆಗುತ್ತದೆ ಅವನು ಕಟ್ಟಬೇಕಾದಂಥ ಹಣ. ಮತ್ತು ಅಭಿವೃದ್ಧಿ ಹೊಂದದೇ ಇರತಕ್ಕಂಥ ಜಾಗದಲ್ಲಿ ಅದು 11 ರೂಪಾಯಿ 10 ಪೈಸೆ. ಅಂದರೆ ಅದರ ಎರಡರಷ್ಟು ಆಗುತ್ತದೆ. ಅದು 3330 ರೂಪಾಯಿ ಆಗುತ್ತದೆ. ಹೀಗೆ ಅದು ವ್ಯತ್ಯಾಸವಾಗುತ್ತದೆ. 20X30 ಅಡಿ ನಿವೇಶನ; 30X40 ಅಡಿ ನಿವೇಶನ, 40X60 ಅಡಿ ನಿವೇಶನ ಎಂದು ಹೀಗೆ ದರ ಕೂಡ ವ್ಯತ್ಯಾಸವಾಗುತ್ತದೆ. ನಗರಸಭೆಗಳಿಗೆ, ತಮ್ಮ ವ್ಯಾಪ್ತಿಗೆ ಬರುವಂಥಾದ್ದು ಶಿವಮೊಗ್ಗ 8 ಕಿಲೋಮೀಟರ್ ವ್ಯಾಪ್ತಿಗೆ ಎಂದು ಬರುತ್ತದೆ. ಅದು 8 ಕಿಲೋಮೀಟರ್‌ನಲ್ಲಿ ಬರುವಂಥಾದ್ದು 20X30 ಅಡಿಗೆ 3 ರೂಪಾಯಿ 60 ಪೈಸೆ. ಅಂದರೆ 1080 ರೂಪಾಯಿ ಆಗುತ್ತದೆ. ಅಭಿವೃದ್ಧಿ ಹೊಂದದೇ ಇರತಕ್ಕಂಥ ಜಾಗದಲ್ಲಿ 7 ರೂಪಾಯಿ 20 ಪೈಸೆ. ಅಂದರೆ 4320 ರೂಪಾಯಿ ಆಗುತ್ತದೆ. ಇದು ಬಿಟ್ಟು ಬೇರೆ ಪಟ್ಟಣ ಪ್ರದೇಶಗಳಲ್ಲಿ 5 ಕಿಲೋಮೀಟರ್ ಇರುವಂಥಾದ್ದು 15X20 ನಿವೇಶನಕ್ಕೆ 1 ರೂಪಾಯಿ 20 ಪೈಸೆ. ಅಂದರೆ ಅವನು 360 ರೂಪಾಯಿ ಕಟ್ಟಬೇಕು. ಅಭಿವೃದ್ಧಿ ಹೊಂದದೇ ಇರುವಲ್ಲಿ ಅದರ ಎರಡು ಪಟ್ಟು ಜಾಸ್ತಿ ಎಂದರೆ 720 ರೂಪಾಯಿ ಆಗುತ್ತದೆ. ಹಾಗೆ 30X40, 20X30, 40X60 ಮತ್ತು 50X80 ಇಂಥಾದ್ದು ಇವತ್ತು ದರವನ್ನು ನಿಗದಿ ಮಾಡಿರತಕ್ಕಂಥಾದ್ದು ಪ್ರಚುರಪಡಿಸಿದ್ದೇವೆ. ಬಹುಶಃ ತಮಗೂ ಕೂಡ ಕೊಟ್ಟಿದ್ದೇವೆ ಎಂದು ಕಾಣುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಈ ರೀತಿ ಸಾವಿರಾರು ಪ್ರಕರಣಗಳು ಇವೆ. ಹುಬ್ಬಳ್ಳಿ-ಧಾರವಾಡದಲ್ಲಿ ಇರಬಹುದು ಮತ್ತು ಬೇರೆ ನಗರಗಳಲ್ಲಿ ಕೂಡ ಸಾವಿರಾರು ಪ್ರಕರಣಗಳು ವಿಲೇವಾರಿಯಾಗದೆ ಹಾಗೆಯೇ ಉಳಿದಿದೆ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಮಾಸಿಕವಾಗಿ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ವಾರ್‌ಫೂಟ್‌ನಲ್ಲಿ ಮಾಡಬೇಕು. ಏಕೆಂದರೆ ಅಂತಹ ಅನಧಿಕೃತವಾಗಿರತಕ್ಕಂಥವರು....

ಅಧ್ಯಕ್ಷರು: ಬೇಗಬೇಗ ಆಗಬೇಕು ಎಂದು ತಾವು ಹೇಳುವುದು.

ಶ್ರೀ ಜಗದೀಶ್ ಶೆಟ್ಟರ್: ಅದಕ್ಕಾಗಿ ತಕ್ಷಣ ಕ್ರಮ ತೆಗೆದುಕೊಂಡು ಮಾಡಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಸನ್ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಒಂದು ಲಕ್ಷದ ನಲವತ್ತು ಒಂದುಸಾವಿರ ಅರ್ಜಿಗಳಲ್ಲಿ ಎರಡು ವರ್ಷಗಳ ನಂತರ ಅದು ವಿಲೇವಾರಿ ಆಗಿರುವುದು 28,626. ಅಂದರೆ ಹತ್ತಿರ ಹತ್ತಿರ 20 ಪರ್ಸೆಂಟ್ ಎರಡು ವರ್ಷದಲ್ಲಿ ಆಗಿದೆ. ಹಾಗಾಗಿ ಇನ್ನು ಎಷ್ಟು ವರ್ಷ ಬೇಕಾಗುತ್ತದೆ ಎಂದು ನೀವೇ ಲೆಕ್ಕಹಾಕಿಕೊಳ್ಳಿ. ಇದು ಮೊದಲನೆಯದು. ಹಾಗಾಗಿ ಈ ಪ್ರಾಧಿಕಾರಗಳನ್ನು ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಮಾಡಿರುವುದರಿಂದ ಅವರ ನೂರೆಂಟು ಕೆಲಸಗಳ ಮಧ್ಯೆ ಬಡವರ ಬಗ್ಗೆ ಗಮನಕೊಡುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಈ ಪ್ರಾಧಿಕಾರಗಳಲ್ಲಿ ಶಾಸಕರಿಗೆ, ಪುರಸಭೆ-ನಗರಸಭೆ ಅಧ್ಯಕ್ಷರುಗಳಿಗೆ ಅವರನ್ನೂ ಕೂಡ ಸದಸ್ಯರನ್ನಾಗಿ ಮಾಡುವುದಕ್ಕೆ ಸರ್ಕಾರಕ್ಕೆ ಏನಾದರೂ ಸಾಧ್ಯವೇ? ಎರಡನೆಯದು, ಈ ಹಣದ ಬಗ್ಗೆ ತಮಗೂ ಕೂಡ ಅಪೇಕ್ಷೆ ಇದೆ ಎಂದು ಹೇಳುತ್ತಿದ್ದೀರಿ. ಈ ಹಣ ನಗರಸಭೆ, ಪುರಸಭೆಗೆ ಬರುವುದಕ್ಕೆ ಅವಕಾಶ ಇಲ್ಲ. ಹಾಗಾದರೆ ಇದಕ್ಕೆ ತೊಂದರೆ ಕೊಡುತ್ತಿರುವವರು ಯಾರು? ಸರ್ಕಾರವೇ ಒಂದು ತೀರ್ಮಾನ ತೆಗೆದುಕೊಂಡು ನಗರಸಭೆ, ಪುರಸಭೆಗಳಿಗೆ ಕೊಡಬೇಕೆಂದು ಏಕೆ ಮಾಡಬಾರದು? ಇದಕ್ಕೆ ಏನು ತೊಂದರೆಯಾಗುತ್ತದೆ, ಏಕೆ ಮಾಡಬಾರದು ಎನ್ನುವುದು ಎರಡನೆಯದು. ಮತ್ತು ಮೂರನೆಯದು, ಈ ಪ್ರಾಧಿಕಾರಗಳಿಗೆ ಈ ರೀತಿ ಸದಸ್ಯರುಗಳನ್ನು ತಾವು ಮಾಡುವುದರಿಂದ ಗಡುವು ಕೂಡ ಫೈನಲೈಸ್ ಆಗುತ್ತದೆ. ಅವರು ಸಕ್ರಮ ಮಾಡುವುದರಿಂದ ಆ ಪುರಸಭೆ, ನಗರಸಭೆ ಅಧ್ಯಕ್ಷರುಗಳಿಗೆ ಮತ್ತು ಶಾಸಕರುಗಳಿಗೆ ಹೆಸರು ಬರುತ್ತದೆ. ಚುನಾವಣೆಗಳಿಗೆ ನಮಗೆ ಅನುಕೂಲ ಕೂಡ ಆಗುತ್ತದೆ. ಬಡವರಿಗೂ ಅನುಕೂಲವಾಗುತ್ತದೆ, ಬೇರೆ ಎಲ್ಲರಿಗೂ ಕೂಡ ಅನುಕೂಲವಾಗುತ್ತದೆ. ಇದಕ್ಕೋಸ್ಕರ ಒಟ್ಟಾರೆ ಇದನ್ನು ಸಕ್ರಮವಾಗಿ ಮಾಡುವ ದಿಕ್ಕಿನಲ್ಲಿ ದಿನಾಂಕವನ್ನು ನಿಗದಿಮಾಡಿ ಇಷ್ಟೇ ದಿನಾಂಕದಲ್ಲಿ ಮುಗಿಸುವಂತಾಗಬೇಕು. ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನೇಮಕ ಮಾಡಬೇಕು. ಹಣ ಕೂಡ ಪುರಸಭೆ, ನಗರಸಭೆಗಳಿಗೆ ತಲುಪಬೇಕು. ಈ ಮೂರು ಅಂಶಗಳಿಗೆ ಸ್ಪಷ್ಟವಾದ ಉತ್ತರವನ್ನು ತಮ್ಮಿಂದ ನಾನು ಅಪೇಕ್ಷೆಮಾಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಜಿಲ್ಲಾಧಿಕಾರಿಗಳಿಗೆ ಕಾರ್ಯಒತ್ತಡ ಇರುವುದು ನಿಜ. ಅದನ್ನು ಉಪವಿಭಾಗಾಧಿಕಾರಿಗಳು ಅಂದರೆ ಅಸಿಸ್ಟೆಂಟ್ ಕಮೀಷನರ್‌ಗಳಿಗೆ ಅದನ್ನು ಅಥರೈಸ್ ಮಾಡಿ ಅದನ್ನು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆನ್ನುವುದು ನಮ್ಮ ಪರಿಶೀಲನೆಯಲ್ಲಿದೆ. ಏಕೆಂದರೆ ತಾವು ತಿಳಿಸಿದ ಹಾಗೆ ಜಿಲ್ಲಾಧಿಕಾರಿಗಳಿಗೆ ಅವರಿಗೆ ಇರತಕ್ಕಂಥ ಕಾರ್ಯ ಒತ್ತಡದಿಂದ ಎಲ್ಲ ಮಾಡಲಿಕ್ಕೆ ಸಾಧ್ಯವಿಲ್ಲ. ಅದನ್ನು

ಉಪವಿಭಾಗಾಧಿಕಾರಿಗಳಿಗೆ ಹಂಚಿದರೆ, ಯಾವರೀತಿಯಲ್ಲಿ ನಾವು ಬೆಂಗಳೂರಿನಲ್ಲಿ ಉಪಆಯುಕ್ತರು ಅಂತ ಮಾಡಿಕೊಂಡುಹೋಗಿದ್ದೇವೆ, ಅದೇರೀತಿಯಲ್ಲಿ ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಗಳು ಅಂತ ಮಾಡಿದರೆ ಬೇಗ ಕೆಲಸ ಆಗುತ್ತದೆಯೆನ್ನತಕ್ಕಂಥಾದ್ದು ಇದೆ. ಮತ್ತು ಖಾಸಗಿಯವರನ್ನು, ಶಾಸಕರನ್ನು ಮತ್ತು ಇತರ ಸದಸ್ಯರುಗಳನ್ನು ನೇಮಕ ಮಾಡಬೇಕು ಎಂದು ತಾವು ಹೇಳಿದ ಸೂಚನೆ ಇರತಕ್ಕಂಥಾದ್ದು ಇದರ ಜೊತೆಗೆ ಸರ್ಕಾರದ ಹಣ ಏನು ಖಜಾನೆಗೆ ಸೇರುತ್ತಾ ಇದೆ, ಅದು ನೇರವಾಗಿ ಇದಕ್ಕೆ ಹೋಗಬೇಕು ಎನ್ನುವಂಥಾದ್ದು, ಇದು ಮೂರೂ ಪರಿಶೀಲನೆಯಲ್ಲಿದೆ. ನಾನೇ ಅದಕ್ಕೆ ಮಂತ್ರಿಯಾಗಿರುವುದರಿಂದ ಇದನ್ನೆಲ್ಲಾ ನಾವು ಯೋಚನೆ ಮಾಡಿದ್ದೇವೆ. ಸೂಕ್ತವಾದ ಸಮಯದಲ್ಲಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಅಧ್ಯಕ್ಷರು: ಆಯಿತು. ಕುಂಬ್ಳೆ ಸುಂದರ್‌ರಾವ್....

ಶ್ರೀ ಎ.ರಾಮದಾಸ್: ಅಧ್ಯಕ್ಷರೇ, ಈಗಾಗಲೇ ಹಿಂದಿನ ಸರ್ಕಾರ ಇದ್ದಾಗ ಶಾಸಕರನ್ನೂ ಕೂಡ ಸದಸ್ಯರನ್ನಾಗಿ ಮಾಡಿ ಜಿ.ಓ ಹೊರಡಿಸಿತ್ತು. ಈ ಸರ್ಕಾರ ಬಂದತಕ್ಷಣ ಅದನ್ನು ವಜಾ ಮಾಡಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮೈಸೂರಿನಲ್ಲ ಸಿದ್ಧರಾಮಯ್ಯನವರು ಇರುವುದರಿಂದ ನಮಗೆ ಯಾರಿಗೂ ಇಲ್ಲ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: ಇದು ಒಬ್ಬರ ಪ್ರಶ್ನೆಯಲ್ಲ. ಇಡೀ ರಾಜ್ಯಕ್ಕೆ ಇರತಕ್ಕಂಥ ಕಾಯಿದೆ ಇದು. ಶಂಕರಲಿಂಗೇಗೌಡರಿಗೆ ಅವರು ಮಾತ್ರ ಕಾಣುತ್ತಾರೆ.

ಅಧ್ಯಕ್ಷರು: ಬಹಳ ಸಮಯ ತೆಗೆದುಕೊಳ್ಳುತ್ತಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ: 13-12-95ಕ್ಕೆ ಮುಂಚೆ ಯಾರು ಅರ್ಜಿ ಹಾಕಿದ್ದಾರೆ ಅದನ್ನು ಮಾತ್ರ ತಾವು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅನೇಕ ಬಡವರಿಗೆ ಅರ್ಜಿ ಹಾಕುವ ವಿಚಾರ ಗೊತ್ತಿರಲಿಲ್ಲ. ಈ ಗಡುವನ್ನು ಕೂಡ ಸ್ವಲ್ಪ ಎಕ್ಸ್‌ಟೆಂಡ್ ಮಾಡಿಕೊಟ್ಟು ಅರ್ಜಿ ಹಾಕುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟರೆ ಕೋಟ್ಯಾಂತರ ಬಡವರಿಗೆ ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ಆ ಎಲ್ಲಾ ವಿಚಾರಗಳ ಜೊತೆಗೆ ಇದನ್ನೂ ಪರಿಶೀಲನೆ ಮಾಡಿ.